ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 4, September-October 2025, Pp. 102-110
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮುಂಡಾಗಳ ಸಾಂಸ್ಕೃತಿಕ ಅನನ್ಯತೆ

**ಡಾ.ಕೆ.ಎಂ.ನಯಾಜ್ ಅಹ್ಮದ್**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಡಿಬಂಡೆ.

***Abstract:***
*ಜಾರ್ಖಂಡ್‌ನ ಒಟ್ಟು ಜನಸಂಖ್ಯೆಯಲ್ಲಿ ಮೂರನೆಯ ಒಂದು ಭಾಗ ಮುಂಡಾ ಬುಡಕಟ್ಟು ಸಮುದಾಯವಿದೆ. ಜಾರ್ಖಂಡ್‌ನ ಛೋಟಾ ನಾಗಪುರದ ಪರಗಣದಲ್ಲಿ ಬರುವ ರಾಂಚಿ, ಹಜಾರಿ ಬಾಗ್, ಪಲಮು, ಗುಮಲಾ, ಸಿಂಗ್ ಭೂಮ್, ಸಂತಾಲ್ ಪರಗಣ, ಖುಂತಿ ಮತ್ತು ಸಿಂಗ್ ದೇಗಾ ಭಾಗದಲ್ಲಿ ಈ ಮುಂಡಾ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ. ಇದರೊಂದಿಗೆ ರೋಹತಾಸ್, ಬಹುಬುವಾ, ಬಕ್ಸಾರ್, ಭೋಜ್‌ಪುರ್ ಮತ್ತು ಪೂರ್ಣಿಯಾ ಜಿಲ್ಲೆಗಳಲ್ಲಿ ಅಲ್ಲಲ್ಲಿ ಚದುರಿದ ರೀತಿ ತಮ್ಮ ಜೀವನವನ್ನು ರೂಪಿಸಿಕೊಂಡಿದ್ದಾರೆ.*

**Keywords:** *ಬುಡಕಟ್ಟು ಸಮುದಾಯ, ಜಾರ್ಖಂಡ್, ಮುಂಡಾ ಬುಡಕಟ್ಟು, ಸಾಂಸ್ಕೃತಿಕ ಅನನ್ಯತೆ*

### ಪೀಠಿಕೆ

ಮುಂಡಾ ಸಮುದಾಯವು ಪೂರ್ವದಿಂದಲೂ ತನ್ನ ಪ್ರಾಚೀನ ಪದ್ಧತಿ ಮತ್ತು ಸಂಸ್ಕೃತಿಯನ್ನು ಅತ್ಯಂತ ಪ್ರಾಮಾಣಿಕವಾಗಿ, ನಿಯಮ ಹಾಗೂ ನಿಷ್ಠೆಗಳಿಂದ ಮೈಗೂಡಿಸಿಕೊಂಡ ಸಮುದಾಯವಾಗಿದೆ. ಇದರೊಂದಿಗೆ ತನ್ನದೇ ಆದ ಆಚರಣೆಗಳು, ಆಹಾರ ಕ್ರಮಗಳು, ಪೂಜಾ ವಿಧಾನಗಳು, ಉಡುಗೆ-ತೊಡುಗೆಗಳು ಹಾಗೂ ತನ್ನದೇ ಆದ ಆರ್ಥಿಕ ರೂಢಿಗಳನ್ನು ಒಳಗೊಂಡಿದ್ದು. ತಮ್ಮಷ್ಟಕ್ಕೆ ತಾವು ಕಾಡುಗಳ ಮಧ್ಯೆ ತಮ್ಮ ಸುಂದರವಾದ ಬದುಕುಗಳನ್ನು ಕಟ್ಟಿಕೊಂಡಿದ್ದಾರೆ.

### ಮುಂಡಾ ಸಂಸ್ಕೃತಿಯಲ್ಲಿ ದೇವರು ಮತ್ತು ಆರಾಧನೆಗಳು

ಮಧ್ಯ ಭಾರತದ ಮುದರಿ ಭಾಷೆ ಮಾತನಾಡುವ ಮಾದ ಸಮುದಾಯದ ಮೂಲವನ್ನು ಇಂದಿಗೂ ಹುಡುಕಲಾಗಿಲ್ಲ. ಈ ಸಮುದಾಯದ ಮೂಲದ ಬಗ್ಗೆ ಇಂದಿಗೂ ಅಸ್ಪಷ್ಟತೆಯೇ ತುಂಬಿದೆ. ಪೂರ್ಣವಾದ ಮಾಹಿತಿಗಳು ಇಂದಿಗೂ ಸಂಪೂರ್ಣವಾಗಿ ತಿಳಿದಿಲ್ಲ. ಪ್ರಾಚೀನ ಕಾಲದಲ್ಲಿ ವಿವಿಧ ಸಮಯಗಳಲ್ಲಿ ಭಾರತದ ವಿವಿಧ ಭಾಗಗಳಿಂದ ಅವರು ವಲಸೆ ಬಂದ ಬಗೆ ಹಾಗೂ ಮಾರ್ಗಗಳ ಬಗ್ಗೆ ಹೇಳಲು ಬಹುತೇಕ ಯಾವುದೇ ಲಿಖಿತ ದಾಖಲೆಗಳಿಲ್ಲ.

ಮುಂಡಾಗಳ ಪ್ರಾಚೀನ ಸಂಪ್ರದಾಯಗಳು ನಮಗೆ ಅವುಗಳ ಮೂಲ ಮತ್ತು ವಲಸೆಯನ್ನು ಪತ್ತೆ ಹಚ್ಚಲು ಸುಳಿವು ನೀಡುತ್ತವೆ. ಈ ಸಂಪ್ರದಾಯಗಳು ಅಸ್ಪಷ್ಟವಾಗಿರುವುದರಿಂದ, ಅಂತಹ ಪ್ರಯತ್ನವು ತುಂಬಾ ಪರಿಣಾಮಕಾರಿಯಾಗಲು ಸಾಧ್ಯವಿಲ್ಲ. ಅದು ಕೇವಲ ಊಹೆಯಾಗಿರಬೇಕು. ಮುಂಡಾ ಗುಂಪಿನ ಭಾಗವಾಗಿರುವ ಮುಂಡಾ ಮತ್ತು ಇತರ ಬುಡಕಟ್ಟು ಜನಾಂಗಗಳು, ಅರಾವಳಿ ಪರ್ವತ ಪ್ರದೇಶದಲ್ಲಿ ಕಂಡು ಬರುವ ಮತ್ತು ವಿಂಧ್ಯದ ಭಾಗದಲ್ಲಿ

***Please cite this article as:*** ನಯಾಜ್ ಅಹ್ಮದ್, ಕೆ.ಎಂ. (2025). ಮುಂಡಾಗಳ ಸಾಂಸ್ಕೃತಿಕ ಅನನ್ಯತೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(4), 102–110

ಕಾಣಸಿಗುವ ಸ್ಥಳಿಯ ಭಾಷೆಗಳನ್ನು ಮಾತನಾಡುತ್ತಾರೆ ಎಂಬ ತರ್ಕವೂ ಇದೆ.

ಜಾರ್ಖಂಡ್ ರಾಜ್ಯದ ಪ್ರಮುಖ ಬುಡಕಟ್ಟು ಸಮುದಾಯವಾದ ಮುಂಡಾಗಳ ಬಗ್ಗೆ ಮತ್ತು ಅವರ ಮೂಲದ ಬಗ್ಗೆ ಹಲವಾರು ವಾದಗಳನ್ನು ತಜ್ಞರು ಮುಂದಿಟ್ಟಿದ್ದಾರೆ. ಮುಂಡಾಗಳು ಭಾರತವನ್ನು ಮಡಗಾಸ್ಕರ್ ಮತ್ತು ಆಫ್ರಿಕಾದೊಂದಿಗೆ ಸಂಪರ್ಕಿಸಿದ್ದಾರೆಂದು ಹೇಳಲಾಗುತ್ತದೆ. ಲೆಮುರಿಯಾ ಎಂಬ ಮುಳುಗಿದ ಕಾಲ್ಪನಿಕ ಖಂಡದಿಂದ ಭಾರತಕ್ಕೆ ಬಂದರೆನ್ನಲಾಗುತ್ತದೆ. ಮತ್ತೊಂದು ವಾದದ ಪ್ರಕಾರ ಮುಂಡಾಗಳು ಈಶಾನ್ಯದಿಂದ ಭಾರತವನ್ನು ಪ್ರವೇಶಿಸಿದರು. ಹಿಮಾಲಯದಾದ್ಯಂತ ಪೂರ್ವ ಟಿಬಿಟ್ ಅಥವಾ ಪಶ್ಚಿಮ ಚೀನಾ, ದಕ್ಷಿಣ ಗಡಿಯ ಆಸ್ಟ್ರೇಲಿಯಾ ಮತ್ತು ದ್ರಾವಿಡ ಜನರ ಮಿಶ್ರಣದಿಂದ ಇವರು ಹುಟ್ಟಿಕೊಂಡರು ಎನ್ನುತ್ತವೆ ಹಲವು ವಾದಗಳು. ಮುಂಡಾಗಳು ವಾಸ್ತವವಾಗಿ ಹೇಳುವಂತೆ ಅವರು ಭಾರತೀಯ ಮಣ್ಣಿನ ನಿಜವಾದ ಮೂಲನಿವಾಸಿಗಳು. ಇವರು ಎಲ್ಲಿಂದಲೂ ಬಂದವರಲ್ಲ. ಈ ಕಾಡುಗಳೇ ಇವರ ಮೂಲ ಸ್ಥಾನ ಎಂಬುದು ಮುಂಡಾರಿಗಳ ವಾದ. ಆದರೆ ಇವೆಲ್ಲಾ ವಿವಿಧ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಮುಂಡಾ ಸಮುದಾಯದ ಉಗಮದ ಬಗ್ಗೆ ಇಂದಿಗೂ ಯಾವುದೇ ನಿರ್ಧಾರಕ್ಕೆ ಪ್ರಾಜ್ಞರು ಬಂದಂತೆ ಕಾಣುವುದಿಲ್ಲ. ಮುಂಡಾಗಳ ಉದಯದ ಬಗ್ಗೆ ಪ್ರಸ್ತುತ ಲಭ್ಯವಿರುವ ಜ್ಞಾನ ಸೀಮಿತವಾಗಿರುವ ಕಾರಣದಿಂದ ನಿರ್ದಿಷ್ಟವಾಗಿ ಏನನ್ನೂ ಹೇಳಲಾಗುವುದಿಲ್ಲ.

ಅವರ ಮೂಲ ಏನೇ ಇರಲಿ ಮತ್ತು ಅವರು ಎಲ್ಲಿಂದಲಾದರೂ ಬಂದಿರಲಿ, ಮುಂಡಾಗಳು ಎರಡು ಸಾವಿರ ವರ್ಷಗಳಿಗೂ ಹೆಚ್ಚು ಕಾಲ ಛೋಟಾ ನಾಗಪುರದಲ್ಲಿ ವಾಸಿಸುತ್ತಿದ್ದಾರೆ ಎಂಬುದಂತೂ ಐತಿಹಾಸಿಕವಾಗಿ ಸತ್ಯವಾದ ಮಾತುಗಳು. ಇವರು 'ಅಸುರ' ಸಮುದಾಯದವರನ್ನು ಹೊರತುಪಡಿಸಿ ಈ ಜಾರ್ಖಂಡ್ ಭೂಮಿಯ ಮೇಲೆ ಇರುವ ಅತ್ಯಂತ ಹಳೆಯ ನಿವಾಸಿಗಳು ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ ಎಂಬುದು ಬಹುತೇಕ ಸಂಶೋಧಕರ ಅನಿಸಿಕೆಯಾಗಿದೆ. ಬುಡಕಟ್ಟು ಜನಾಂಗವು ತಮ್ಮ ಪ್ರಾಚೀನ ಹಿಂದೂ ಬೇರುಗಳಿಂದ ಮುಂಡಾ ಎಂಬ ಹೆಸರನ್ನು ಪಡೆದಿದೆ ಎಂಬುದು ತಿಳಿಯುತ್ತದೆ.

ಮುಂಡಾಗಳು ತಮ್ಮನ್ನು ಹೊರೋ–ಕೋ (ಪುರುಷರ ಸಮಾಜ) ಮತ್ತು ಅವರ ಜಾತಿ ಹೋರೋ(ಪುರುಷರು) ಎಂದು ಕರೆದುಕೊಳ್ಳುತ್ತಾರೆ. ಅವರ ಉಡುಗೆ ತುಂಬಾ ಸರಳ ಮತ್ತು ಕನಿಷ್ಠ. ಮುಂಡಾ ಸಮುದಾಯದ ಪುರುಷರು ಸಾಮಾನ್ಯವಾಗಿ ಬೊಟೊಯ್ ಎಂಬ ಸೊಂಟದ ಬಟ್ಟೆಯನ್ನು ಧರಿಸುತ್ತಾರೆ. ಇದು ಆರರಿಂದ ಒಂಬತ್ತು ಮೊಳ ಉದ್ದ ವಿರುತ್ತದೆ ಮತ್ತು ಎರಡೂ ತುದಿಗಳಲ್ಲಿ ವರ್ಣರಂಜಿತ ಕುಚ್ಚು ದಾರಗಳನ್ನು ಹೊಂದಿರುತ್ತದೆ. ಯುವಕರು ತಮ್ಮ ಸೊಂಟದ ಸುತ್ತಲೂ ಗರ್ಡಲ್ ಎಂದು ಕರೆಯಲ್ಪಡುವ ಒಂದು ರೀತಿಯ ಬೆಲ್ಟ್‌ಅನ್ನು ಸಹ ಧರಿಸುತ್ತಾರೆ. ಇದನ್ನು ಕೆಲವೊಮ್ಮೆ ರೇಷ್ಮೆಯಿಂದ ತಯಾರಿಸಲಾಗುತ್ತದೆ ಮತ್ತು ಇದನ್ನು ಲಮಂಗ್–ಗರ್ಡಲ್ ಎಂದೂ ಕರೆಯಲಾಗುತ್ತದೆ.

ಮನೆಯಲ್ಲಿ ಉಳಿಯುವ ವಯಸ್ಸಾದ ಪುರುಷರು ಭಗೋವಾ ಎಂಬ ಸಣ್ಣ ಬಟ್ಟೆಯನ್ನು ಮಾತ್ರ ಧರಿಸುತ್ತಾರೆ. ಚಳಿಗಾಲದಲ್ಲಿ ಕಂಬಳಿಗಳನ್ನು ಬಳಸಲಾಗುತ್ತದೆ. ಹೆಚ್ಚು ಶ್ರೀಮಂತ ವರ್ಗಗಳು ಮಾತ್ರ ಕೋಟುಗಳು ಮತ್ತು ಗಡಿಯಾರಗಳನ್ನು ಧರಿಸುತ್ತಾರೆ.

ಇನ್ನು ಮಹಿಳೆಯರು ತಮ್ಮ ಸೊಂಟದ ಸುತ್ತಲೂ ಉದ್ದವಾದ ಬಟ್ಟೆಯ ತುಂಡನ್ನು ಧರಿಸುತ್ತಾರೆ. ಅದರ ಒಂದು ಭಾಗವು ಎದೆಯನ್ನು ಮುಚ್ಚಿಕೊಂಡರೆ ನಂತರ ಅದೇ ಬಟ್ಟೆಯ ಬಹುಭಾಗ ಇಡೀ ದೇಹಕ್ಕೆ ಸುತ್ತುಕೊಳ್ಳುತ್ತಾ ಹೋಗುತ್ತದೆ. ಮುಂಡಾ ಮಹಿಳೆಯರು ಲೆಹೆಂಗಾವನ್ನು ಧರಿಸುವುದು ಅವರ ನೆಚ್ಚಿನ ಪೋಶಾಕುಗಳಲ್ಲಿ ಒಂದು. ಈ ಸಮುದಾಯದವರು ಶೂಗಳು ಮತ್ತು ಪಾದರಕ್ಷೆಗಳನ್ನು ಸಾಮಾನ್ಯವಾಗಿ ಧರಿಸುವುದಿಲ್ಲ.

ಮಾರುಕಟ್ಟೆಗೆ ಹೋಗುವಾಗಲೋ ಅಥವಾ ಮತ್ಯಾವುದೋ ಮುಖ್ಯವಾದ ಕಾರ್ಯಗಳಿಗೆ ಮನೆಯಿಂದ ಹೊರಡುವಾಗ ಮುಂಡಾ ಸಮುದಾಯದ ಪುರುಷರು ತಲೆಗೆ ಪೇಟವನ್ನು ಧರಿಸುತ್ತಾರೆ. ಅವರ ಬಟ್ಟೆಗಳು ಗ್ರಾಮಗಳಲ್ಲಿಯೇ ಮಹಿಳೆಯರು ನೂಲಿನಿಂದ ಮತ್ತು ಅದೇ ಹಳ್ಳಿಯ ನೇಕಾರರು ಹತ್ತಿಯಿಂದ ನೇಯ್ದ ಬಟ್ಟೆಗಳೇ ಆಗಿರುವುದು ವಿಶೇಷ. ನಗರಗಳಲ್ಲಿ ಅಥವಾ ನಗರ ಪ್ರದೇಶಕ್ಕೆ ತೀರಾ ಹತ್ತಿರದಲ್ಲಿ ವಾಸಿಸುವ ಮುಂಡಾಗಳು ಈಗ ಗಿರಿಣಿಗಳಿಂದ ತಯಾರಿಸಿದ ಬಟ್ಟೆಯನ್ನು ಬಳಸುತ್ತಿದ್ದಾರೆ.

ಯುವ ಮುಂಡಾ ಮಹಿಳೆಯರು ಅಲಂಕಾರ ಪ್ರಿಯರು. ಈ ಯುವತಿಯರು ತಮ್ಮ ದೇಹವನ್ನು ವಿವಿಧ ಆಭರಣಗಳಿಂದ ಅಲಂಕರಿಸಲು ಇಷ್ಟಪಡುತ್ತಾರೆ. ಈ ಆಭರಣಗಳನ್ನು ಸಾಮಾನ್ಯವಾಗಿ ಹಿತ್ತಾಳೆಯಿಂದ ತಯಾರಿಸಲಾಗುತ್ತದೆ. ಬೆಳ್ಳಿಯ ಕಿವಿಯೋಲೆಗಳನ್ನು ಕೆಲವೊಮ್ಮೆ ಬಳಸಲಾಗುತ್ತದೆ. ಹಿತ್ತಾಳೆ ಬಳೆಗಳು ಮತ್ತು ಮೆರುಗೆಣ್ಣೆ ಬಳೆಗಳನ್ನು ಸಹ ಸಾಮಾನ್ಯವಾಗಿ ಧರಿಸಲಾಗುತ್ತದೆ. ಹಿತ್ತಾಳೆಯ ಹಾರಗಳು, ಬೆರಳು ಮತ್ತು ಕಾಲ್ಬೆರಳ ಉಂಗುರಗಳು ಸಾಮಾನ್ಯವಾಗಿದೆ. ವೈಯುಕ್ತಿಕ ಅಲಂಕಾರವು ಹೆಚ್ಚಾಗಿ ಯುವಜನರಲ್ಲಿ ಒಂದು ಹವ್ಯಾಸವಾಗಿದೆ.

ಮುಂಡಾ ಸಮುದಾಯದವರಲ್ಲಿ ಬಹುತೇಕ ಮಂದಿ ಉದ್ದನೆಯ ಕೂದಲನ್ನು ಬಿಡಲು ಇಷ್ಟ ಪಡುತ್ತಾರೆ. ಹೀಗೆ ತಲೆಯಲ್ಲಿ ಉದ್ದ ಕೂದಲನ್ನು ಬಿಟ್ಟುಕೊಂಡು, ತಮ್ಮ ಕತ್ತುಗಳಲ್ಲಿ ಮಣಿಗಳ ಹಾರಗಳನ್ನು ಧರಸಿಸುತ್ತಾ ತಮ್ಮನ್ನು ತಾವು ಮೆರೆಸಿಕೊಳ್ಳುವುದು ವಾಡಿಕೆ. ಇದರೊಂದಿಗೆ ಕಬ್ಬಿಣದ ಬಳೆಗಳಿಂದ ತಮ್ಮನ್ನು ಅಲಂಕರಿಸಿಕೊಳ್ಳುತ್ತಾರೆ. ಯುವಕರು ಮತ್ತು ಮಹಿಳೆಯರು ವಿಶೇಷವಾಗಿ ಹೂವುಗಳನ್ನು ಇಷ್ಟಪಡುತ್ತಾರೆ. ಮುಂಡಾ ಹುಡುಗಿಯರು ತಮ್ಮ ಹಣೆಯ ಮೇಲೆ, ಬೆನ್ನಿನ ಮೇಲೆ, ತೋಳುಗಳ ಮೇಲೆ, ಕೈಗಳಲ್ಲಿ ಮತ್ತು ಪಾದಗಳಲ್ಲಿ ಹಚ್ಚೆ ಹಾಕಿಸಿಕೊಳ್ಳುವುದು ಸಾಮಾನ್ಯವಾದ ವಿಚಾರ. ಹಚ್ಚೆಗಳು ಇವರ ಸೌಂದರ್ಯವನ್ನು ಹೆಚ್ಚಿಸುತ್ತದೆ ಜೊತೆಗೆ ತಮ್ಮವರ ನಂಬಿಕೆಗಳನ್ನು ಕಡೆಯತನಕ ತಮ್ಮ ಬಳಿ ಉಳಿಸುತ್ತವೆ ಎಂಬ ನಂಬಿಕೆಯೂ ಇವರಲ್ಲಿ ಅಧಿಕವಾಗಿರುವ ಕಾರಣ ಇವರು ಹಚ್ಚೆಗಳಿಗೆ ಮೊರೆ ಹೋಗುತ್ತಾರೆ.

ದಟ್ಟ ಕಾಡುಗಳಲ್ಲಿಯೇ ತಮ್ಮ ಜೀವನವನ್ನು ಕಂಡುಕೊಂಡಿರುವ ಮುಂಡಾ ಸಮುದಾಯದವರು ಹೆಚ್ಚಿನ ಪ್ರಮಾಣದಲ್ಲಿ ಕೃಷಿಯ ಮೇಲೆ ಅವಲಂಬಿತರಾಗಿದ್ದಾರೆ. ಆಧುನಿಕ ಕೃಷಿ ಉಪಕರಣಗಳ ಬದಲಾಗಿ ಇಂದಿಗೂ ಬಹುತೇಕ ಮುಂಡಾರಿಗಳು ತಮ್ಮ ಸಂಪ್ರದಾಯಿಕ ಶೈಲಿಯಲ್ಲಿಯೇ ವಿವಿಧ ರೀತಿಯ ಕೃಷಿ ಉಪಕರಣಗಳನ್ನು ಬಳಸುತ್ತಾರೆ. ಉಳುಮೆ ಮಾಡಲು ಕಬ್ಬಿಣದ ನೇಗಿಲುಗಳನ್ನು ಬಳಸಲಾಗುತ್ತದೆ. ಕಬ್ಬಿಣದ ಹಾರೆಗಳು, ಮಣ್ಣು ತೆಗೆಯುವ ಗುದ್ದಲಿಗಳು, ಕಬ್ಬಿಣದ ಸರಳುಗಳು, ಕುಡಗೋಲುಗಳು ಮತ್ತು ವಿವಿಧ ಒಕ್ಕಣೆ ಉಪಕರಣಗಳನ್ನು ಈ ಸಮುದಾಯ ತನ್ನ ಕೃಷಿ ಚಟುವಟಿಕೆಗಳಲ್ಲಿ ಬಳಸುತ್ತಾರೆ.

ಇನ್ನೂ ವಿಶೇಷ ಎಂದರೆ ಮುಂಡಾ ಜನಾಂಗದವರು ಸ್ವತಃ ಬಡಗಿಗಳಾಗಿ ಕೆಲಸ ಮಾಡುತ್ತಾರೆ. ತಮಗೆ ಬೇಕಾದ ಕೃಷಿ ಉಪಕರಣಗಳು ಇರಬಹುದು ಅಥವಾ ಮನೆಗೆ ಸಂಬಂಧಸಿದ ಉಪಕರಣಗಳನ್ನು ಅತ್ಯಂತ ನಾಜೂಕಿನಿಂದಲೇ ತಮ್ಮ ತಮ್ಮಲ್ಲಿಯೇ ಅವರು ಸಿದ್ಧಪಡಿಸಿಕೊಳ್ಳುತ್ತಾರೆ.

ಇನ್ನು ಮಹಿಳೆಯರು ನೂಲುವ ಚಕ್ರಗಳ ಮೇಲೆ ಹತ್ತಿದಾರವನ್ನು ತಿರುಗಿಸುತ್ತಾ ಬಟ್ಟೆಗಳ ತಯಾರಿಕೆಗೆ ಅಗತ್ಯವಾದ ನೂಲನ್ನು ಸಂಗ್ರಹ ಮಾಡಿಕೊಳ್ಳುತ್ತಾರೆ. ಗೃಹಿಣಿಯರು ತಮ್ಮ ಗುಡಿಸಲುಗಳ ಅಂಗಳದಲ್ಲಿ ಮನೆಗೆ ಅಗತ್ಯವಾದ ಎಣ್ಣೆಯನ್ನು ತಯಾರಿಸಿಕೊಳ್ಳುತ್ತಾರೆ. ಮುಂಡಾ ಸಮುದಾಯದವರು ಮೀನು ಶಿಕಾರಿಯನ್ನು ಹೆಚ್ಚಾಗಿ ಇಷ್ಟ ಪಡುವ ಜನರಾಗಿದ್ದಾರೆ. ಈ ಮೀನುಗಳ ಶಿಕಾರಿಗೆ ತಾವೇ ವಿವಿಧ ಬಗೆಯ ಬಲೆಗಳನ್ನು ಹೆಣೆದುಕೊಂಡು ಮನೆಗಳಲ್ಲಿ ಇರಿಸಿಕೊಂಡಿರುತ್ತಾರೆ.

ಮುಂಡಾ ಜನಾಂಗದ ಮುಖ್ಯ ಆಹಾರವೆಂದರೆ ಅನ್ನ. ಮುಂಡಾಗಳಲ್ಲಿಯೇ ಸ್ವಲ್ಪ ಪ್ರಮಾಣದಲ್ಲಿ ಶ್ರೀಮಂತರಿದ್ದು ಅಂತಹವರು ವಿವಿಧ ಬಗೆಯ ಬೇಯಿಸಿದ ಬೇಳೆಗಳನ್ನು ಸಹ ಸೇವಿಸುತ್ತಾರೆ. ಬಡ ಮುಂಡಾ ಜನಾಂಗದವರು ನಶೆ ಏರಿಸಿಕೊಳ್ಳಲು ತಾವೇ ಸ್ಥಳೀಯವಾಗಿ ತಯಾರಿಸಿಕೊಂಡ ಗೊಂಡಲಿವ ಅಥವಾ ಮಹುವಾ ಎಂಬ ಮದ್ಯವನ್ನು ಸೇವಿಸುತ್ತಾರೆ. ಜೋಳದ ರೊಟ್ಟಿಯನ್ನು ಅಪರೂಪವೆಂಬಂತೆ ತಿನ್ನುತ್ತಾರೆ.

ಸಂತೋಷದ ಸಮಯಗಳಲ್ಲಿ ಕೋಳಿಗಳನ್ನು ಹೆಚ್ಚಾಗಿ ತಿನ್ನುತ್ತರೆ. ಪಂಚ ಪರಗಣಗಳ ಮುಂಡಾಗಳು ಮತ್ತು ಇತರ ಭಾಗಗಳ ಮುಂಡಾಗಳು ಮತ್ತು ಹೆಚ್ಚು ಶ್ರೀಮಂತ ಮುಂಡಾಗಳು ಗೋಮಾಂಸ, ಹಂದಿ ಮಾಂಸ ಮತ್ತು ಎಮ್ಮೆ ಮಾಂಸವನ್ನು ಆಹಾರವಾಗಿ ಸೇವಿಸುತ್ತಾರೆ.

ಅವರು ಅದನ್ನು ಕೆಟ್ಟದಾಗಿ ಪರಿಗಣಿಸುವುದಿಲ್ಲ. ಈರುಳ್ಳಿ, ಬಿಳಿಬದನೆ, ಮೂಲಂಗಿ, ಟೊಮೊಟೊ, ಕುಂಬಳಕಾಯಿ, ಸೋರೆಕಾಯಿ, ಬೆಂಡೆಕಾಯಿ ಮತ್ತು ಬೀನ್ಸ್‌ಗಳನ್ನು ಹಿತ್ತಲಿನಲ್ಲಿ ಬೆಳೆಯಲಾಗುತ್ತದೆ. ಮುಂಡಾಗಳ ನೆಚ್ಚಿನ ಪಾನೀಯವೆಂದರೆ ಅಕ್ಕಿ ವೈನ್. ಪ್ರತಿಯೊಂದು ಕುಟುಂಬವು ತನ್ನದೇ ಆದ ಮದ್ಯವನ್ನು ತಯಾರಿಸುತ್ತದೆ. ಹಿಂದೂ ಧರ್ಮಕ್ಕೆ ಮತಾಂತರಗೊಂಡ ಮುಂಡಾಗಳು ಸಾಮಾನ್ಯವಾಗಿ ಯಾವುದೇ ಮಾದಕ ಪಾನೀಯಗಳನ್ನು ಸೇವಿಸುವುದಿಲ್ಲ.

ಮುಂಡಾ ಜನಾಂಗದವರು ಪಿತೃ ಪ್ರಧಾನ ಕುಟುಂಬವನ್ನು ಅತ್ಯಂತ ಪ್ರೀತಿಯಿಂದ ಒಪ್ಪಿಕೊಂಡ ಜನರು. ಕುಟುಂಬದಲ್ಲಿ ತಂದೆಯ ಅಧಿಕಾರವು ಸರ್ವೋಚ್ಚವಾಗಿದೆ. ಇದು ಸಾಮಾನ್ಯವಾಗಿ ಪೋಷಕರು ಮತ್ತು ಅವಿವಾಹಿತ ಮಕ್ಕಳನ್ನು ಒಳಗೊಂಡಿರುತ್ತದೆ. ಹೆಚ್ಚು ಶ್ರೀಮಂತ ಕುಟುಂಬಗಳಲ್ಲಿ ಕೆಲವು ಸಂಬಂಧಗಳು ಸಾಮಾನ್ಯವಾಗಿ ಶಾಶ್ವತವಾಗಿರುತ್ತದೆ. ಮಹಿಳೆಯರು ಆಸ್ತಿಯನ್ನು ಹೊಂದಲು ಮತ್ತು ಅನುವಂಶಿಕವಾಗಿ ಪಡೆಯಲು ಸಾಧ್ಯವಿಲ್ಲ. ಮುಂಡಾ ಮಗಳು ತನ್ನ ತಂದೆಯ ಉತ್ತರಾಧಿಕಾರಿಗಳಿಂದ ನಿರ್ವಹಣೆ ಮತ್ತು ವಿವಾಹ ವೆಚ್ಚಗಳನ್ನು ಪಡೆಯುವ ಹಕ್ಕನ್ನು ಹೊಂದಿದ್ದಾಳೆ. ಮುಂಡಾ ಮಹಿಳೆ ಕುಟುಂಬದ ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾಳೆ. ಅವಳು ಹೊಲಗಳಲ್ಲಿ ಮತ್ತು ಮನೆಯಲ್ಲಿ ಕೆಲಸ ಮಾಡುತ್ತಾಳೆ. ಅಡುಗೆ ಮಾಡುವುದು, ನೂಲುವುದು ಮತ್ತು ಮಕ್ಕಳನ್ನು ನೋಡಿಕೊಳ್ಳುವುದು ಮುಂಡಾ ಮಹಿಳೆಯರ ಪ್ರಾಥಮಿಕ ಕರ್ತವ್ಯಗಳಾಗಿವೆ.

ಅವಳ ಸಾಮಾಜಿಕ ಸ್ಥಾನಮಾನವು ತನ್ನ ಗಂಡನಿಗೆ ಅಧೀನವಾಗಿದ್ದರೂ, ಕೆಳಮಟ್ಟದ್ದಲ್ಲ. ಎಲ್ಲಾ ಹೊಸ ಕಾರ್ಯಗಳಲ್ಲಿ ಅವಳ ಆಶಯಗಳನ್ನು ಸಾಮಾನ್ಯವಾಗಿ ಗೌರವಿಸಲಾಗುತ್ತದೆ. ಮುಂಡಾ ಮಹಿಳೆ ಇಡೀ ಕುಟುಂಬದ ಬೆಳವಣಿಗೆಯಲ್ಲಿ ಮತ್ತು ತನ್ನ ಸುತ್ತಲಿನ ಪರಿಸರದ ಸಂರಕ್ಷಣೆಯ ಜೊತೆಗೆ ಮನೆಯ ಮಕ್ಕಳನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾಳೆ.

ಮುಂಡಾ ಬುಡಕಟ್ಟು ಜನಾಂಗವನ್ನು 'ಕಿಲ್ಲಿಗಳು' (ಒಳ ಜಾತಿಗಳ ಗುಂಪು) ಎಂಬ ದೊಡ್ಡ ಸಂಖ್ಯೆಯ ಅನ್ಯಜಾತಿ ವಿವಾಹ ಘಟಕಗಳಾಗಿ ವಿಂಗಡಿಸಲಾಗಿದೆ. ಮುಂಡಾ ಸಂಪ್ರದಾಯದ ಪ್ರಕಾರ 'ಕಿಲ್ಲಿ'ಯ ಎಲ್ಲಾ ಸದಸ್ಯರು ಸಾಮಾನ್ಯವಾಗಿ ಒಬ್ಬರೇ ಪೂರ್ವಜರ ವಂಶಸ್ಥರು. ಮುಂಡಾಗಳು ಕಿಲ್ಲಿಗೆ ಸಂಬಂಧಿಸಿದಂತೆ ಅನ್ಯಜಾತಿ ವಿವಾಹ ಪದ್ಧತಿ ಇಲ್ಲಿ ರೂಢಿಯಲ್ಲಿದೆ. ಆದರೆ ಮುಂಡಾ ಬುಡಕಟ್ಟಿಗೆ ಸಂಬಂಧಿಸಿದಂತೆ ಅವರದೇ ಆದ ನೀತಿ ನಿಯಮಗಳನ್ನು ರೂಢಿಸಿಕೊಂಡಿದ್ದು ಮುಂಡಾ ಭಾಷೆಯನ್ನು ಮಾತನಾಡುವ 'ಸಂತಾಲ್', 'ಹೋ', 'ಖರಿಯಾ', 'ಬಿಹೋರ್' ಮತ್ತು 'ಅಸುರ್' ನಂತಹ ಬುಡಕಟ್ಟಿನ ಯಾವುದೇ ಸದಸ್ಯರ ನಡುವೆ ಯಾವುದೇ ಮಾನ್ಯ ವಿವಾಹಗಳು ನಡೆಯುವುದಿಲ್ಲ ಅಂದರೆ ಈ ಸಮುದಾಯಗಳು ಮುಂಡಾ ಭಾಷೆ ಮಾತನಾಡಿದರೂ ಮುಂಡಾಗಳಲ್ಲಿ ವಿವಾಹ ಆಗುವಂತೆ ಇಲ್ಲ.

ಮನೆಗಳಲ್ಲಿ ನಡೆಯುವ, ಅಥವಾ ಮನೆಯಿಂದ ಹೊರಗೆ ನಡೆಯುವ ಬಹುತೇಕ ಸಂಪ್ರದಾಯಗಳಿಗೆ, ರೀತಿ ನೀತಿಗಳಿಗೆ ಸಂಬಂಧಿಸಿದಂತೆ ಆಯಾ ಕುಟುಂಬದಲ್ಲಿನ ಕೆಲವು ಹಿರಿಯರು ಮಾರ್ಗದರ್ಶಕರಾಗುತ್ತಾರೆ. ಆ ಸಮುದಾಯಕ್ಕೆ ಸಂಬಂಧಿಸಿದ ಕೆಲವು ಸಾಂಪ್ರಾದಾಯಿಕ ಕರ್ತವ್ಯಗಳನ್ನು, ವಿಧಿ ವಿಧಾನಗಳನ್ನು ನಿರ್ವಹಿಸಲು ಆ ಹಿರಿಯ ಜೀವಗಳು ಬದ್ಧರಾಗಿರುವುದನ್ನು ಮುಂಡಾರಿಗಳಲ್ಲಿ ನಾವು ಕಾಣಬಹುದು.

ಮುಂಡಾ ಸಮುದಾಯದವರಲ್ಲಿ ಪೂಜೆಯು ಮಾನವ ಕುಲದ ಮೇಲೆ ಒಳಿತನ್ನು ಉಂಟುಮಾಡುವ ಮತ್ತು ಸಂತೋಷ ನೀಡುವ ಏಕೈಕ ಉದ್ದೇಶವನ್ನು ಹೊಂದಿವೆ. ಇದರೊಂದಿಗೆ ಪ್ರಕೃತಿಯಲ್ಲಿ ಆಗ್ಗಿಂದ್ದಾಗ್ಗೆ ಘಟಿಸುವ ವಿಪತ್ತುಗಳನ್ನು ತಪ್ಪಿಸುವುದು ಈ ಪೂಜೆಗಳ ಅಥವಾ ಆರಾಧನೆಗಳ ಮೂಲ ಎಂದು ನಂಬಲಾಗಿದೆ.

ಮುಂಡಾಗಳು 'ಸಿಂಗ್–ಬೊಂಗಾ' ಎಂದು ಕರೆಯುವ ಸರ್ವೋಚ್ಚ ದೇವತೆಯನ್ನು ನಂಬುತ್ತಾರೆ. 'ಸಿಂಗ್' ಎಂದರೆ ಹಗಲು, ಮತ್ತು 'ಬೊಂಗಾ' ಎಂದರೆ ದೇವರು. ಸಿಂಗ್ಬೊಂಗಾ ಎಂದರೆ ಒಮ್ಮೆ ಸೂರ್ಯ ದೇವರೊಂದಿಗೆ ಗುರುರ್ತಿಸಲ್ಪಟ್ಟಿದ್ದರು ಎಂಬ ಅಂಶ ದಾಖಲೆಗಳಲ್ಲಿ ಮತ್ತು ಮುಂಡಾ ಮೌಖಿಕ ಪರಂಪರೆಯಲ್ಲಿ ಉಲ್ಲೇಖವಿದೆ.

ಆದರೆ ಮುಂಡಾಗಳು ಇದನ್ನು ತೀವ್ರವಾಗಿ ನಿರಾಕರಿಸುತ್ತಾರೆ. ಅವನು ಸೂರ್ಯನಲ್ಲ ಅಥವಾ ಸೂರ್ಯನಲ್ಲಿ ವಾಸಿಸುವುದಿಲ್ಲ. ಆದರೆ ಸ್ವರ್ಗದಲ್ಲಿ ವಾಸಿಸುತ್ತಾನೆ. ಆಹಾರದ ಅಗತ್ಯವಿಲ್ಲದ ಏಕೈಕ ದೇವರು ಅವನು. ಧರ್ಮ ಅನೈತಿಕವಾದಾಗ ಅದನ್ನು ಉದ್ಧಾರ ಮಾಡಲು, ದುಷ್ಟ ಕಾರ್ಯಗಳನ್ನು ಮಾಡುವ ವ್ಯಕ್ತಿಗಳನ್ನು ಶಿಕ್ಷಿಸಲು ಆತ ಬರುತ್ತಾನೆ. 'ಸಿಂಗ್ಬೊಂಗಾ' ಮೂಲತಃ ಮನುಷ್ಯರಿಗೆ ಗೋಚರಿಸುತ್ತಿದ್ದರು. ಇದೇ ಕಾರಣ ಅವರು ಹೆಚ್ಚು ಪವಿತ್ರರಾಗಿದ್ದರು ಎಂದು ಮುಂಡಾಗಳು ಇಂದಿಗೂ ನಂಬುತ್ತಾರೆ.

ಆದರೆ ಈಗ ಪ್ರಪಂಚದಾದ್ಯಂತ ಇರುವ ಮಾನವರು ಪಾಪಿಗಳಾಗಿದ್ದಾರೆ. ಹಾಗಾಗಿ ಅವನು ಅದೃಶ್ಯನಾಗಿದ್ದಾನೆ. ಮುಂಡಾಗಳಿಂದ ನಿಜವಾಗಿಯೂ ಪೂಜಿಸಲ್ಪಡುವ ಏಕೈಕ ವ್ಯಕ್ತಿ ಅವನು. ಅವರಿಗೆ ಯಾವುದೇ ಸ್ವಾರ್ಥ ಉದ್ದೇಶವಿಲ್ಲದೆ, ಕೇವಲ ಪೂಜೆಗಳನ್ನು ಮಾಡಲಾಗುತ್ತದೆ. ಅವನು ಬಿಳಿ ಮೇಕೆ ಅಥವಾ ಬಿಳಿ ಕೋಳಿಯಂತಹ ಬಿಳಿ ಬಣ್ಣದ ವಸ್ತುಗಳದ್ದು (ಬಿಳಿಯನ್ನು ಮುಂಡಾಗಳು ಶುದ್ಧತೆಯ ಸಂಕೇತವಾಗಿ ಸ್ವೀಕರಿಸುತ್ತಾರೆ) ಮಾತ್ರ ಬಲಿದಾನವನ್ನು ಸ್ವೀಕರಿಸುತ್ತಾನೆ.

ಮುಂಡಾ ಸಮುದಾಯದಲ್ಲಿ ಯಾರೇ ಆಗಲಿ ಯಾವುದೇ ಹೊಸ ಕೆಲಸ ಪ್ರಾರಂಭಕ್ಕೂ ಮೊದಲು ಈ ಸಿಂಗ್ಬೋಂಗಾಗೆ ಪ್ರಾರ್ಥನೆ ಸಲ್ಲಿಸುತ್ತಾರೆ. ಪ್ರತಿ ಊಟಕ್ಕೂ ಮೊದಲು ಅವನನ್ನು ನೆನಪಿಸಿಕೊಳ್ಳಲಾಗುತ್ತದೆ. ಮತ್ತು ಗೌರವಾರ್ಥವಾಗಿ ಕೆಲವು ಅಕ್ಕಿ ಕಾಳುಗಳನ್ನು ನೆಲದ ಮೇಲೆ ಇಡಲಾಗುತ್ತದೆ. ಗಂಭೀರ ವಿಪತ್ತಿನ ಸಮಯದಲ್ಲಿ ಸಿಂಗ್ಬೊಂಗಾನನ್ನು ಕೊನೆಯ ಉಪಾಯವಾಗಿ ನಿರ್ದಿಷ್ಟವಾಗಿ ಅವಾಹಿಸಲಾಗುತ್ತದೆ. ಅವನು ಒಂದು ರೀತಿಯ ನೈತಿಕ ದೇವರು. ಇತರ ದೇವರುಗಳು ಮತ್ತು ಆತ್ಮಗಳು ಅವನಿಗೆ ಅಧೀನವಾಗಿವೆ ಎಂದು ಈ ಮುಂಡಾಗಳು ನಂಬಿದ್ದಾರೆ.

ಪ್ರತ್ಯೇಕ ವರ್ಗದಲ್ಲಿ ಹಳ್ಳಿಯ ಪ್ರಧಾನ ದೇವತೆ ಇದೆ. ಇವುಗಳನ್ನು 'ಹಾತು–ಬೊಂಗಾಕೊ' ಎಂದು ಕರೆಯಲಾಗುತ್ತದೆ. ನಂತರ ಮನೆಯ ದೇವತೆಗಳು ಅಥವಾ 'ಓರಾ–ಬೊಂಗಾಕೊ' ಬರುತ್ತವೆ. ಇವು ಪ್ರತಿ ಕುಟುಂಬದ ಮೃತ ಪೂರ್ವಜರ ಆತ್ಮಗಳಾಗಿವೆ ಎಂಬ ನಂಬಿಕೆ ಮುಂಡಾ ಸಮುದಾಯದಲ್ಲಿ ಕಾಣ ಸಿಗುತ್ತದೆ. ಪ್ರತಿಯೊಂದು ಸಾಮಾಜಿಕ ಮತ್ತು ಧಾರ್ಮಿಕ ಸಮಾರಂಭದಲ್ಲಿ ಅವರ ಆಶೀರ್ವಾದವನ್ನು ಕೋರಲಾಗುತ್ತದೆ. ಕುಟುಂಬಗಳ ಮುಖ್ಯಸ್ಥರು ವಿವಿಧ ಬಗೆಯ ತಿಂಡಿಗಳಿಂದ ತಯಾರಿಸಿದ ಭೋಗಗಳನ್ನು ಅರ್ಪಿಸುತ್ತಾರೆ.

ಎರಡನೇ ವರ್ಗದಲ್ಲಿ 'ಚುರಿನ್', 'ಮುವಾಸ್', 'ಅಪ್ಸಾನ್', 'ಹಂಕರ್, ಮತ್ತು 'ನಾಸನ್', 'ಬೊಂಗಾಸ್'ನಂತಹ ದುಷ್ಟಶಕ್ತಿಗಳು ಸೇರಿವೆ. ಹಿಂಸಾತ್ಮಕ ಅಥವಾ ಅಸ್ವಾಭಾವಿಕ ಮರಣ ಹೊಂದಿದವರ ಆತ್ಮಗಳನ್ನು ಸಮಾಧಾನ ಪಡಿಸುವುದು ಮುಂಡಾ ಗೃಹಸ್ಥ ಅಥವಾ ಮುಂಡಾ ಗ್ರಾಮದ ಪಾದ್ರಿಯ ಕರ್ತವ್ಯವಲ್ಲ, ಬದಲಿಗೆ ಪ್ರೇತಗಳ ಬೇಟೆಗಾರ ಅಥವಾ ಪೂಜಾರಿಯ(ಇಂತಹಾ ಪೂಜಾರಿಯನ್ನು 'ಓಝಾ' ಎಂದು ಕರೆಯುವವರು) ಕರ್ತವ್ಯವಾಗಿದೆ. ಧಾತುರೂಪದ ಆತ್ಮಗಳು (ಮಾನಿತಾ–ಬೊಂಗಾಸ್) ಮತ್ತು ದುಷ್ಟಶಕ್ತಿಗಳು (ಬನಿತಾ–ಬೊಂಗಾಸ್) ಸಹ ಈ ಮುಂಡಾರಿ ಸಂಸ್ಕೃತಿಯಲ್ಲಿ ಇವೆ.

ಇವುಗಳ ಜೊತೆಗೆ ಮತ್ತೊಂದು ವರ್ಗದ ದೇವತೆಗಳಿವೆ, ಅವರ ಕಾರ್ಯವು ಪರೋಪಕಾರಿಯಾಗಿವೆ. ರಕ್ಷಕ ದೇವತೆಗಳಂತೆ, ಅವರು ನಿರ್ದಿಷ್ಟ ಕುಟುಂಬಗಳು ಮತ್ತು ವರ್ಗಗಳನ್ನು ರಕ್ಷಿಸುತ್ತಾರೆ. ಇದನ್ನು ನೋಡುವಾಗ ನಮ್ಮ ರಾಜ್ಯದ ತುಳುನಾಡಿನ ಸಂಸ್ಕೃತಿಯಲ್ಲಿ ಕಾಣಸಿಗುವ ಭೂತಗಳು ಹಾಗು ಅದರ ಆರಾಧನೆಗಳು ನೆನಪಿಗೆ ಬಂದವು. ಮುಂಡಾಗಳಲ್ಲಿ ಹಿಂದೂಕರಣಗೊಂಡರೆ ತಮ್ಮ ಬುಡಕಟ್ಟು ಪೂಜೆಯಲ್ಲಿ ಭಾಗವಹಿಸುವುದಿಲ್ಲ. ಆದರೂ ಅವರು ಗ್ರಾಮದ ಪರವಾಗಿ ಗ್ರಾಮ ದೇವತೆಗಳಿಗೆ ಬಲಿ ನೀಡುವ ಸ್ಥಾನವನ್ನು ಬಿಟ್ಟುಕೊಟ್ಟಿಲ್ಲ.

**ಮುಂಡಾರಿ ಸಮುದಾಯದ ಹಬ್ಬಗಳು**

ಮುಂಡಾಗಳು ಹಲವಾರು ಹಬ್ಬಗಳನ್ನು ಆಚರಿಸುತ್ತಾರೆ. ಅವುಗಳಲ್ಲಿ ಹೆಚ್ಚಿನವು ಅರೆ–ಧಾರ್ಮಿಕ ಸ್ವಭಾವದ್ದಾಗಿದ್ದು, ಕೃಷಿ ಕೆಲಸದ ವಿವಿಧ ಹಂತಗಳನ್ನು ಗುರ್ತಿಸುತ್ತವೆ. 'ಮಾಗೆ ಪೊರೊಬ್' ಹಬ್ಬವನ್ನು ಜನವರಿಯಲ್ಲಿ ಆಚರಿಸಲಾಗುತ್ತದೆ. 'ಫಾಗು ಪೊರೊಬ್' ಹಿಂದೂ ಹಬ್ಬ ಹೋಳಿಯೊಂದಿಗೆ ಹೊಂದಿಕೆಯಾಗುತ್ತದೆ. ಹಬ್ಬ ಮುಗಿದ ಮರುದಿನ ಮುಂಡಾ ಸಮುದಾಯದ ಎಲ್ಲಾ ಯುವಕರು ಔಪಚಾರಿಕವಾಗಿ ಬೇಟೆಯಾಡಲು ಹೋಗುತ್ತಾರೆ.

ಮತ್ತೊಂದು ಪ್ರಮುಖ ಹಬ್ಬವೆಂದರೆ 'ಸರ್ಹುಲ್'. ಇದನ್ನು ಚೈತ್ರ ಮಾಸದಲ್ಲಿ (ಏಪ್ರಿಲ್) ಆಚರಿಸಲಾಗುತ್ತದೆ. ಈ ಹಬ್ಬಗಳು ಭತ್ತದ ಬಿತ್ತನೆ, ನಾಟಿ ಮತ್ತು ಕೊಯ್ಲುಗಳನ್ನು ಗುರುತಿಸುತ್ತವೆ. 'ಕರಮ್', ಮತ್ತು 'ದಸಾಯಿ' (ದಸರಾ) ಹಬ್ಬಗಳು ಹಿಂದೂ ಧರ್ಮದಿಂದ ಬಂದವು. ಗೋರಾ ಬೊಂಗಾಗೆ ಬಲಿ ನೀಡುವ ದನಗಳ ಕಲ್ಯಾಣಕ್ಕಾಗಿ 'ಸೋಹ್ರೈ' ಹಬ್ಬವನ್ನು ಕಾರ್ತಿಕ ಮಾಸದಲ್ಲಿ ಆಚರಿಸಲಾಗುತ್ತದೆ. ಸಾರ್ವತ್ರಿಕವಾಗಿ ಆಚರಿಸಲ್ಪಡುವ 'ಸೊಸೊ–ಬೊಂಗಾ' ಹಬ್ಬವು ಸಿಂಗ್ಬೊಂಗಾದ ಕಥೆಯನ್ನು ಹಾಡುವ ಮೂಲಕ ಆಚರಿಸಲಾಗುತ್ತದೆ.

ಹೆಚ್ಚಿನ ಭಾರತೀಯ ಸಮಾಜಗಳಂತೆ, ಮುಂಡಾ ಜೀವನ ಚಕ್ರವು ಜನನ, ಮದುವೆ ಮತ್ತು ಸಾವು ಸೇರಿದಂತೆ ಹಲವಾರು ಪ್ರಮುಖ ಸಮಾರಂಭಗಳನ್ನು ಒಳಗೊಂಡಿದೆ. ಗರ್ಭಧಾರಣೆಯನ್ನು ಪತ್ತೆ ಹಚ್ಚಿದ ತಕ್ಷಣ, ಗರ್ಭಿಣಿ ತಾಯಿ ಮತ್ತು ಅವಳಿಗೆ ಹುಟ್ಟಲಿರುವ ಮಗುವಿನ ಭವಿಷ್ಯದ ಯೋಗಕ್ಷೇಮವನ್ನು ಖಚಿತಪಡಿಸಿಕೊಳ್ಳಲು 'ಫರಾಸಿ–ಬೊಂಗಾವ'ನ್ನು ಪೂಜಿಸಲಾಗುತ್ತದೆ.

ಗರ್ಭಾವಸ್ಥೆಯಲ್ಲಿ, ಅವಳು ಕೆಲವು ನಿಷೇಧಗಳನ್ನು ಪಾಲಿಸಬೇಕಾಗುತ್ತದೆ. ಮಗುವಿನ ಜನನದ ನಂತರ, ಮನೆಯು ಎಂಟು ದಿನಗಳವರೆಗೆ ಧಾರ್ಮಿಕವಾಗಿ ಅಶುದ್ಧವಾಗಿರುತ್ತದೆ. ಈ ಅವಧಿಯ ಕೊನೆಯಲ್ಲಿ, 'ಛಟ್ಟಿ' ಅಥವಾ ಶುದ್ಧೀಕರಣ ಸಮಾರಂಭವನ್ನು ನಡೆಸಲಾಗುತ್ತದೆ. ಸಮಾರಂಭವು ಹಬ್ಬವನ್ನು ಒಳಗೊಂಡಿರುತ್ತದೆ. ಮರುದಿನ, ನಾಮಕರಣ ಸಮಾರಂಭವನ್ನು ಆಚರಿಸಲಾಗುತ್ತದೆ. ಅಲ್ಲಿ ಮಗುವಿಗೆ ಪೂರ್ವಜರ ಹೆಸರನ್ನು ಇಡಲಾಗುತ್ತದೆ. ಜಾತಕದ ಮೂಲಕ ಮಗುವಿನ ಹೆಸರನ್ನು ಹೊರತೆಗೆಯಲಾಗುತ್ತದೆ. ಬುಡಕಟ್ಟು ಜನಾಂಗಗಳಲ್ಲಿ ಮಗುವಿನ ಮೊದಲ ಮತ್ತು ಮೂರನೇ ವರ್ಷದ ನಡುವೆ ಕಿವಿ ಚುಚ್ಚುವ

ಸಮಾರಂಭವನ್ನು ನಡೆಸಲಾಗುತ್ತದೆ. ಇದು ಮಗುವನ್ನು ಬುಡಕಟ್ಟು ಜನಾಂಗಕ್ಕೆ ಸೇರಿಸುವುದನ್ನು ಗುರುತಿಸುತ್ತದೆ. ಹುಡುಗಿಯರ ಮೊದಲ ಮುಟ್ಟಿಗೆ ಸಂಬಂಧಿಸಿದ ಯಾವುದೇ ವಿಶೇಷ ಆಚರಣೆಗಳಿಲ್ಲ.

ಇತರ ಹಲವು ಪ್ರದೇಶಗಳಂತೆ, ಮುಂಡಾ ವಿವಾಹಗಳಲ್ಲಿ ಹಿಂದೂ ಪ್ರಭಾವಗಳು ಸಾಕಷ್ಟು ಸ್ಪಷ್ಟವಾಗಿವೆ. ಪುರಾತನ ಪದ್ಧತಿಗಳಲ್ಲಿ ವಿಶಿಷ್ಟವಾದ ಹಿಂದೂ ಬಟ್ಟೆಗಳಿವೆ. ಹಿಂದೂ ಪ್ರಭಾವದಿಂದಾಗಿ ರಾಂಚಿ ಜಿಲ್ಲೆಯ ಪೂರ್ವ ಪರಗಣದಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳ ಮದುವೆಯ ವಯಸ್ಸು ಕಡಿಮೆಯಾಗಿದೆ. ಬುಡಕಟ್ಟು ಸಂಪ್ರದಾಯವೆಂದರೆ ಯಾವುದೇ ಮುಂಡಾ ಸಮುದಾಯದ ಹುಡುಗ ಹೊಲವನ್ನು ಉಳುವ ನೇಗಿಲು ತಯಾರಿ ಮಾಡುವ ಮೊದಲು ಮದುವೆಯಾಗಬಾರದು. ತಾಳೆ ಎಲೆಗಳಿಂದ ಚಾಪೆ ನೇಯುವ ಮತ್ತು ಹತ್ತಿ ನೂಲುವ ಮೊದಲು ಹುಡುಗಿ ಮದುವೆಯಾಗಬಾರದು. ಈ ಸರಳ ನಿಯಮವನ್ನು ಈಗ ನಿರ್ಲಕ್ಷಿಸಲಾಗಿದೆ ವಿವಾಹದಲ್ಲಿ ಸದ್ಗುಣವನ್ನು ಹುಡುಕಲಾಗುತ್ತದೆ. ಮೊದಲು ಹೆಚ್ಚಿನ ದಂಪತಿಗಳು ಪರಸ್ಪರ ಇಷ್ಟ ಪಟ್ಟು ಒಬ್ಬರನ್ನೊಬ್ಬರು ಅರ್ಥೈಸಿಕೊಂಡು ನಂತರ ಮದುವೆ ಆಗುತ್ತಿದ್ದಾರೆ.

ಈಗ ಪೋಷಕರು ಏರ್ಪಡಿಸಿದ ಮದುವೆಯನ್ನು ಹೆಚ್ಚು ಗೌರವಾನ್ವಿತವೆಂದು ಪರಿಗಣಿಸಲಾಗಿದೆ. ಮದುವೆಗಾಗಿ ಹುಡುಗನ ಒಪ್ಪಿಗೆಯನ್ನು ಔಪಚಾರಿಕವಾಗಿ ಕೇಳಲಾಗುತ್ತದೆ ಮತ್ತು ಪಡೆಯಲಾಗುತ್ತದೆ. ಮದುವೆ ಮಾತುಕತೆಗಳಲ್ಲಿ ಶಕುನಗಳು(ಶುಭಚಿಹ್ನೆಗಳು) ಗಮನಾರ್ಹ ಪಾತ್ರವನ್ನು ವಹಿಸುತ್ತವೆ. ಬಹಳಷ್ಟು ಅವುಗಳ ಮೇಲೆ ಅವಲಂಬಿತವಾಗಿದೆ. ವಧುವಿನ ಬೆಲೆಯನ್ನು ನಿಶ್ಚಿತಾರ್ಥ ಅಥವಾ ಚೆಂಡಿನ ಸಮಾರಂಭದಲ್ಲಿ ಪಾವತಿಸಲಾಗುತ್ತದೆ.

ಮುಂಡಾ ಮದುವೆಯ ಕೆಲವು ವಿಧಿಗಳು ಹಿಂದೂ ವಿಧಿಗಳ ಅಪೂರ್ಣ ರೂಪಾಂತರಗಳಾಗಿವೆ. ಮದುವೆಯು ಸಾಮಾನ್ಯವಾಗಿ ಏಕಪತ್ನಿತ್ವವಾಗಿದೆ. ವಿಚ್ಛೇದನವನ್ನು ಅನುಮತಿಸಲಾಗಿದೆ. ವಿಚ್ಛೇದಿತ ಮಹಿಳೆಯರು ಮತ್ತು ವಿಧವೆಯರ ಮರುವಿವಾಹ ಆಗುವುದನ್ನೂ ಸಹ ಅನುಮತಿಸಲಾಗಿದೆ. ವಿಚ್ಛೇದನ ಪ್ರಕರಣವನ್ನು ಗ್ರಾಮ ಪಂಚಾಯತ್‌ನ ನ್ಯಾಯ ಮಂಡಳಿಯು ಇತ್ಯರ್ಥಪಡಿಸುತ್ತದೆ. ಈ ಪಂಚಾಯತ್‌ಗಳು ಮೊದಲು ಅತೃಪ್ತ ದಂಪತಿಗಳ ನಡುವೆ ಸಾಮರಸ್ಯವನ್ನು ತರಲುತೀವ್ರ ಪ್ರಯತ್ನಗಳನ್ನು ಮಾಡುತ್ತವೆ. ಅವರು ಸಮನ್ವಯವನ್ನು ತರಲು ವಿಫಲವಾದಾಗ, ಸಭೆಯಲ್ಲಿ ಜನರ ಮಧ್ಯೆ 'ಸಾಕಂ–ಚಾರಿ' ಅಥವಾ 'ಸಾಲ್' ಎಲೆಯನ್ನು ಇಡುತ್ತಾರೆ. ಈ ಎಲೆಗಳನ್ನು ಪ್ರತ್ಯೇಕತೆಯ ಸಂಕೇತವಾಗಿ ಇರಿಸಲಾಗುತ್ತದೆ. ಅವರು ವಿಚ್ಛೇದನ ಪಡೆದ ನಂತರ ಈ ಎಲೆಯನ್ನು ಎರಡು ತುಂಡುಗಳಾಗಿ ಹರಿದು ಬಿಸಾಡಿದಾಗ ವಿಚ್ಛೇದನ ಖಾತರಿ ಆಗಿ ಹೋಗುತ್ತದೆ.

**ದಹನ ಸಂಸ್ಕಾರಗಳು**

ಸಾಂಪ್ರದಾಯಿಕವಾಗಿ, ಮುಂಡಾಗಳು ದೇಹವನ್ನು ದಹನ ಮಾಡಿ ಮೂಳೆಗಳನ್ನು ಸಂಗ್ರಹಿಸಿ, ವಾರ್ಷಿಕ 'ಜಂಗ್–ಟೋಪಾ' (ಮೂಳೆ ಸಮಾಧಿ) ದಿನದಂದು 'ಸಸಾನ್' ಕುಟುಂಬದೊಳಗೆ ಔಪಚಾರಿಕವಾಗಿ ಹೂಳುತ್ತಾರೆ. ಆದರೂ ಕೆಲವು ಹಳ್ಳಿಗಳಲ್ಲಿ, ದಹನವನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆ. ಹಿಂದೆ, ಸಸಾನ್‌ಗೆ ಪ್ರತ್ಯೇಕ ಸಮಾಧಿ ಸ್ಥಳ ಅಗತ್ಯವಿರಲಿಲ್ಲ. ಆದರೆ ದಹನ ಪದ್ಧತಿಯ ಕುಸಿತವು ಅದನ್ನು ಅಗತ್ಯವಾಗಿಸಿದೆ. ಸಸಾನ್ ಹಳ್ಳಿಗಳಲ್ಲಿ, ಎಲ್ಲರ ಚಿತಾಭಸ್ಮವನ್ನು ಹೂಳಲಾಗುವುದಿಲ್ಲ. ಆದರೆ 'ಖುಂಟ್ ಕಟ್ಟಿದಾರರು' ಅಥವಾ 'ಭೂಯಿನ್ ಹಾರರ' ಚಿತಾಭಸ್ಮವನ್ನು ಮಾತ್ರ ಹೂಳಲಾಗುತ್ತದೆ. 'ರೈಯತ್'ಗಳು 'ಮಸಾರಾ' ಎಂಬ ಪ್ರತ್ಯೇಕ ಸ್ಮಶಾನವನ್ನು ಹೊಂದಿದ್ದಾರೆ. ಸಾವು ಸಂಭವಿಸಿದಾಗ ಸಾವಾದ ಕುಟುಂಬ ಧಾರ್ಮಿಕವಾಗಿ ಅಶುದ್ಧವಾಗಿರುತ್ತದೆ ಎಂಬ ನಂಬಿಕೆಯಿದೆ. ಮೂರನೇ, ಐದನೇ, ಏಳನೇ ಅಥವಾ ಒಂಭತ್ತನೇ ದಿನದಂದು, ಶುದ್ಧೀಕರಣ ಆಚರಣೆಯನ್ನು

ನಡೆಸಲಾಗುತ್ತದೆ. ಇದರಲ್ಲಿ ಎಲ್ಲಾ ಸಂಬಂಧಿಕರು ಸ್ನಾನ ಮಾಡುತ್ತಾರೆ. ಕೂದಲು ಮತ್ತು ಗಡ್ಡವನ್ನು ಬೋಳಿಸಿಕೊಳ್ಳುತ್ತಾರೆ ಮತ್ತು ಉಗುರುಗಳನ್ನು ಕತ್ತರಿಸುತ್ತಾರೆ. ಮೃತರ ಆತ್ಮವು ಹಿಂತಿರುಗಿ ಕುಟುಂಬ ಅಥವಾ ಗ್ರಾಮಕ್ಕೆ ಹಾನಿಯಾಗದಂತೆ ತಡೆಯಲು ಅದಕ್ಕೆ ಅರ್ಪಣೆಗಳನ್ನು ಅರ್ಪಿಸಲಾಗುತ್ತದೆ.

ಮೃತರು ತಮ್ಮ ಸಮುದಾಯವನ್ನು ಪ್ರವೇಶಿಸಲು ಕುಟುಂಬದ ಸದಸ್ಯರು ಮನೆಯಲ್ಲಿ ಪವಿತ್ರ ಸ್ಥಳದಲ್ಲಿ ಪ್ರಾರ್ಥಿಸುತ್ತಾರೆ. ಇದನ್ನು 'ಉಂಬುಲ್–ಅಡೆರ್' ಸಮಾರಂಭ ಅಥವಾ ಮೃತರ ನೆರಳನ್ನು ನೆನಪಿಸಿಕೊಳ್ಳುವುದು ಎಂದು ಕರೆಯಲಾಗುತ್ತದೆ. ಚಳಿಗಾಲದ ಭತ್ತದ ಕೊಯ್ಲಿನ ನಂತರ, ಪ್ರತಿ ಮುಂಡಾ ಗ್ರಾಮದಲ್ಲಿ 'ಜಂಗ್–ಟೋಪಾ' ಅಥವಾ ಮೂಳೆ ಸಮಾಧಿ ಸಮಾರಂಭಕ್ಕೆ ದಿನಾಂಕವನ್ನು ನಿಗಧಿ ಪಡಿಸಲಾಗುತ್ತದೆ.

ಅಲ್ಲಿ ಹಿಂದಿನ ಹನ್ನೆರಡು ತಿಂಗಳುಗಳಲ್ಲಿ ಒಂದು ಅಥವಾ ಹೆಚ್ಚಿನದಾಗಿ ಮುಂಡಾ ನಿವಾಸಿಗಳು ಸಾವನ್ನಪ್ಪಿದ್ದರೆ ಸಾಮೂಹಿಕವಾಗಿ ಜಂಗ್‌ಟೋಪಾ ಸಮಾರಂಭ ನಡೆಯುತ್ತದೆ. ಮೃತರ ಎಲ್ಲಾ ಸಂಬಂಧಿಕರಿಗೆ ಆಹ್ವಾನಗಳನ್ನು ಕಳುಹಿಸಲಾಗುತ್ತದೆ. ಅವರು ಮೃತರ ಮನೆಯಲ್ಲಿ ಅಕ್ಕಿಯಿಂದ ತಯಾರಿಸಿದ ಮದ್ಯವನ್ನು, ಜೊತೆಗೆ ಅಕ್ಕಿ, ಬೇಳೆ, ಉಪ್ಪು, ತಂಬಾಕು ಮತ್ತು ಅಂತಹುದೇ ವಸ್ತುಗಳನ್ನು ಉಡುಗೊರೆಯಾಗಿ ನೀಡುತ್ತಾರೆ.

ತಂದೆ ಅಥವಾ ಹಿಂದೆ ಮರಣ ಹೊಂದಿದ ಇತರ ಕುಟುಂಬ ಸದಸ್ಯರ ಮೂಳೆಗಳನ್ನು ಈಗಾಗಲೇ ಕಲ್ಲಿನ ಚಪ್ಪಡಿಯ ಕೆಳಗೆ ಹೂಳಿದ್ದರೆ, ಮೃತರ ಮೂಳೆಗಳನ್ನು ಒಂದು ಮಣ್ಣಿನ ಮಡಿಕೆಯಲ್ಲಿ ಇಟ್ಟು ಹಿಂದೆ ಇರಿಸಿದ ಕಲ್ಲಿನ ಚಪ್ಪಡಿಯ ಕೆಳಗೆ ಇಡಲಾಗುತ್ತದೆ. ಇಲ್ಲದಿದ್ದರೆ, ಹೊಸ ಕಲ್ಲಿನ ಚಪ್ಪಡಿಯನ್ನು ಇಡಲಾಗುತ್ತದೆ. ಮೃತರು ಬೇರೆ ಗ್ರಾಮದಲ್ಲಿ ಸತ್ತರೆ, ಚಿತಾಭಸ್ಮವನ್ನು ಸಾಮಾನ್ಯವಾಗಿ ಅವರ ಪೂರ್ವಜರ ಗ್ರಾಮದಲ್ಲಿ ಹೂಳಲಾಗುತ್ತದೆ.

ಮುಂಡಾಗಳಲ್ಲಿ ಮೂಢನಂಬಿಕೆ ವ್ಯಾಪಕವಾಗಿದೆ. ಎಲ್ಲಾ ಕಾಯಿಲೆಗಳು, ಅಪಘಾತಗಳು ಅಥವಾ ದುರಾದೃಷ್ಟಗಳಿಗೆ 'ಬನಿತಾ–ಬೊಂಗಾ' ಎಂಬ ದುಷ್ಟ ಶಕ್ತಿಗಳೇ ಕಾರಣವೆಂದು ನಂಬಲಾಗಿದೆ. ವಿಭಿನ್ನ ಶಕ್ತಿಗಳು ವಿವಿಧ ಕಾಯಿಲೆಗಳನ್ನು ಉಂಟುಮಾಡುತ್ತವೆ ಎಂದು ನಂಬಲಾಗಿದೆ. 'ನಾಸನ್ ಬೊಂಗಾಸ್' ಅನಾರೋಗ್ಯಕ್ಕೆ ಕಾರಣವೆಂದು ನಂಬಲಾಗಿದೆ. ಬಹಳ ಹಿಂದಿನಿಂದಲೂ ಕುಷ್ಠರೋಗವು ಸಹಾ ಬೋಂಗಾಗಳ ಶಾಪ ಎಂಬ ನಂಬಿಕೆ ಇಂದಿಗೂ ಪ್ರಚಲಿತವಾಗಿದೆ. ಹುಚ್ಚು ಅಥವಾ ಹುಚ್ಚುತನವು ಪ್ರೇತದಿಂದ (ಆಯೇಗಾ–ಬೊಂಗಾ) ಉಂಟಾಗುತ್ತದೆ. ಅಂದರೆ ಪ್ರೇತವು ಯಾವೂದೋ ರೀತಿಯಲ್ಲಿ ಗಾಯಗೊಂಡಾಗ ಅಥವಾ ಯಾವುದಾದರೂ ವ್ಯಕ್ತಿ ನಿರ್ದಿಷ್ಟ ವ್ಯಕ್ತಿ ಮಾಡುವ ಮಾಟ ಮಂತ್ರದಿಂದ ಸಂಧಿವಾತ ಉಂಟಾಗಬಹುದು ಎಂದು ನಂಬಲಾಗಿದೆ. ಒಬ್ಬ ವ್ಯಕ್ತಿಯು ಅನಾರೋಗ್ಯಕ್ಕೆ ಒಳಗಾದಾಗ, ರೋಗ ನಿರ್ಣಯ ಮತ್ತು ಚಿಕಿತ್ಸೆಯನ್ನು ಸೂಚಿಸಲು ಭೂತೋಚ್ಚಾಟಕ ಅಥವಾ ಮಾಟಗಾತಿ ವೈದ್ಯರನ್ನು ಕರೆಯಲಾಗುತ್ತದೆ.

ಮುಂಡಾಗಳು ದುಷ್ಟಕಣ್ಣು ಮತ್ತು ಮಾಟಗಾತಿಯರ ನಕಾರಾತ್ಮಕ ಪ್ರಭಾವವನ್ನು ನಂಬುತ್ತಾರೆ. ಮಾಟಗಾತಿಯನ್ನು ಕೆಲವೊಮ್ಮೆ ಹೊಡೆದು ಸಾಯಿಸಲಾಗುತ್ತಿತ್ತು. ಪ್ರಾಚೀನ ಕಾಲದಲ್ಲಿ 'ಓಡೋರ್ಕಾ' ಎಂದು ಕರೆಯಲ್ಪಡುವ ಮಾನವ ಬಲಿ (ನರಬಲಿ) ಭಯಾನಕ ಅಭ್ಯಾಸವು ಮುಂಡಾ ಸಮಾಜದಲ್ಲಿಯೂ ಪ್ರಚಲಿತವಾಗಿತ್ತು. ವಿಪತ್ತಿನ ಸಮಯದಲ್ಲಿ ಮತಿ–ಓಜಾ ಮಾನವನ ಬಲಿಯ ಅಗತ್ಯವನ್ನು ಘೋಷಿಸುತ್ತಿದ್ದರು. ಪ್ರಸ್ತುತ ಶತಮಾನದಲ್ಲಿ ಇತ್ತೀಚಿನ ಯಾವುದೇ ಪ್ರಕರಣಗಳು ವರದಿಯಾಗಿಲ್ಲ.

ಅವರ ಅನೇಕ ಮೂಢನಂಬಿಕೆಗಳ ಹೊರತಾಗಿಯೂ ಮುಂಡಾಗಳು ತುಂಬಾ ಸಂತೋಷವನ್ನು ಅತಿ ಹೆಚ್ಚಾಗಿ ಪ್ರೀತಿಸುವ ಜನರಾಗಿದ್ದಾರೆ. ಇವರು ಬಿಡುವಿನಲ್ಲಿ ಕ್ರೀಡೆಗಳು

ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗುತ್ತಾರೆ. ಅವರು ತಮ್ಮ ಬಿಡುವಿನ ವೇಳೆಯನ್ನು ಜಾನಪದ ಕಥೆಗಳು, ಒಗಟುಗಳು ಮತ್ತು ಗಾದೆಗಳನ್ನು ಕೇಳುವುದರಲ್ಲಿ ಮತ್ತು ಬಿಡಿಸುವಲ್ಲಿ ಕಳೆಯುತ್ತಾರೆ. ವಾದ್ಯ ಸಂಗೀತ, ಮೃದುತ್ವ ಮತ್ತು ಕರುಣೆಯಿಂದ ತುಂಬಿದ ಅವರ ಪ್ರೇಮ ಗೀತೆಗಳು, ಕಲಾತ್ಮಕ ನೃತ್ಯಗಳೊಂದಿಗೆ, ಕಾಡಿನ ಜೀವನಕ್ಕೆ ಉತ್ಕೃಷ್ಟತೆಯನ್ನು ಮತ್ತು ಸಂತೋಷವನ್ನು ನೀಡುತ್ತದೆ. ಹೀಗೆ, ಮುಂಡಾಗಳು ವೈವಿಧ್ಯಮಯ ಸಾಂಸ್ಕೃತಿಕ ಅಂಶಗಳ ಮಿಶ್ರಣದ ಮೂಲಕ ಸುಂದರವಾದ ಜೀವನವನ್ನು ಸೃಷ್ಟಿಸಿಕೊಂಡಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ನಯಾಜ್ ಅಹ್ಮದ್, ಕೆ.ಎಂ. *ಬಿರ್ಸಾ ಮುಂಡಾನನ್ನು ಹುಡುಕುತ್ತಾ.* ಸನ್‌ಸ್ಟಾರ್ ಪಬ್ಲಿಷರ್.
- Alam, Shamsher & Kumari, Meena. (2017). Tribal Heritage Conservation in Jharkhand from an Anthropological Viewpoint. Indian journal of social research. 58(6).
- Das, S. (2014). Changing cultural profile of a tea garden community: A case study of Mundas in Tripura. International Journal of Innovative Research and Studies, 3(8), 338-346.
- Huda, M. S. (2021). The Mundas: an ethnic community in the south-west coastal region of Bangladesh (Buno/kuli/Sarna/Horoko, Indigenous people during the British period coming from Ranchi). *Anthropology*. https://doi.org/10.33774/coe-2021-m0qws
- Sachchidananda, N. (1965). Culture Change in Tribal Bihar. Munda and Oraon. *Journal of the American Oriental Society*, *85*(2), 291. https://doi.org/10.2307/598063
- Siddiq, Abu & Habib, Ahsan & Hasan Chowdhury, Adil. (2018). Hunting-gathering subsistence of Munda tribe in tropical rainforest of northeastern Bangladesh. 1(1). 59-71.